ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2409/2015

ಚಾಸಾ:2 ಪ್ರಾಸಾ:1

ದಿನಾಂಕ: 04.09.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಜಲಜಾಕ್ಷಿ |
| ಗಂಡನ ಹೆಸರು | : | ರಂಗ ಬಾಬು |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಆರೋಪಿತರ ಪರಿಚಯವಿದೆ. ದಿ: 14-02-2015 ರಂದು ಬೆಳಿಗ್ಗೆ 10-45 ಗಂಟೆಗೆ ನಾನು ರಾತ್ರಿ ಕರ್ತವ್ಯವನ್ನು ಮುಗಿಸಿ ಮನೆಗೆ ವಾಪಸ್ಸು ಬಂದಾಗ ಮನೆಯ ಸಿಟ್ ಔಟ್ ನಲ್ಲಿ ಟಿವಿ ನೋಡುತ್ತಾ ಕುಳಿತಿದ್ದಾಗ ಚಾಸಾ-4ರವರು ಬಂದು ಆರೋಪಿತರು ಆತನ ಬಳಿ ಗಲಾಟೆ ಮಾಡಿರುವುದಾಗಿ ತಿಳಿಸಿ ಆರೋಪಿತರು ಆತನ ಜಾಗದಿಂದ ಮಣ್ಣು ಶೀಲೆ ಕಲ್ಲನ್ನು ಎಳೆದು ರಸ್ತೆಗೆ ಹಾಕುತ್ತಿರುವುದಾಗಿ ತಿಳಿಸಿರುತ್ತಾರೆ. ಅದೇ ದಾರಿಯಲ್ಲಿ ಚಾಸಾ-1ರವರು ಅಂಗಡಿಯಿಂದ ಬರುತ್ತಿದ್ದು ಆಕೆಯನ್ನು ದೂಡಿ ಈ ದಾರಿಯಲ್ಲಿ ಬರಬೇಡ ಎಂದು ಹೇಳಿ ಅವಾಚ್ಯ ಶಬ್ದಗಳಾದ ರಂಡೆಯವರೇ ಸೂಳೆಯವರೇ ಇಲ್ಲಿ ತಿರುಗಬೇಡಿ ಅರ್ಥವಾಗುವುದಿಲ್ಲವಾ ಎಂದು ಹೇಳಿ ಚಾಸಾ-4ರವರ ಕೈಯನ್ನು 1ನೇ ಆರೋಪಿ ಹಿಂದಕ್ಕೆ ಹಿಡಿದು ಕಟ್ಟಿದ್ದು 2 ಮತ್ತು 3ನೇ ಆರೋಪಿತರು ಅವರನ್ನು ಹೊಡೆಯುತ್ತಿದ್ದರು. ಚಾಸಾ-4ರವರಿಗೆ ಕಾಲಿನಿಂದ ತುಳಿದಿರುತ್ತಾರೆ.

ಸದ್ರಿ ಜಾಗಕ್ಕೆ ಬಂದರೆ ಕಾಲು ಮುರಿಯುವುದಾಗಿ ಬೆದರಿಸಿರುತ್ತಾರೆ. ನಾನು ಅಲ್ಲಿಗೆ ಹೋದಾಗ ನನ್ನನ್ನು ದೂಡಿ ನನ್ನ ನೈಟಿಯನ್ನು ಹರಿದಿರುತ್ತಾರೆ. 2ನೇ ಆರೋಪಿ ನನ್ನ ಬಲಭುಜಕ್ಕೆ ನೋವು ಉಂಟು

ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ-3, 6 ಮತ್ತು ಇತರರು ಸೇರಿದ್ದರು. ಅನಂತರ ನಾನು ಚಾಸಾ-1ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲಿಸಿರುತ್ತೇನೆ. ಅನಂತರ ಚಾಸಾ-1ರವರೊಂದಿಗೆ ಠಾಣೆಗೆ ಹೋಗಿ ಆಕೆಯ ಪರವಾಗಿ ನಾನೇ ದೂರು ನೀಡಿರುತ್ತೇನೆ.

ಅದೇ ದಿನ ಸಂಜೆ 4-15 ರಿಂದ 5 ರ ಸಮಯಕ್ಕೆ ಪೊಲೀಸರು ಬಂದು ಪಂಚನಾಮೆ ತಯಾರಿಸಿರುತ್ತಾರೆ. ಜಾಗವನ್ನು ನಾನೇ ತೋರಿಸಿರುತ್ತೇನೆ. ನಾನು ಧರಿಸಿದ್ದ ನೈಟಿಯನ್ನು ಪೋಲಿಸರಿಗೆ ಹಾಜರುಪಡಿಸಿರುತ್ತೇನೆ. ಎರಡೂ ಪಂಚನಾಮೆ ನಡೆಸುವ ಕಾಲಕ್ಕೆ ಚಾಸಾ-8 ಮತ್ತು 9 ರವರು ಹಾಜರು ಇದ್ದರು. ದಿಃ 07-04-2015ರ ಪಂಚನಾಮೆಯನ್ನು ನಾನು ಧರಿಸಿದ್ದ ನೇರಳೆ ಬಣ್ಣದ ನೈಟಿಯನ್ನು ಹಾಜರುಪಡಿಸುವಾಗ ಸಂಜೆ 4-30 ರಿಂದ 5 ಗಂಟೆ ವೇಳೆಗೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಪಂಚನಾಮೆ ಮತ್ತು ಸ್ವತ್ತು ಸ್ವಾಧೀನತಾ ಪಂಚನಾಮೆಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ನೈಟಿಯನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ನಾನು 15 ವರ್ಷಕ್ಕೆ ಎಸ್ ಎಸ್ ಎಲ್ ಸಿ ಮುಗಿಸಿದ್ದು ನನಗೆ ಈಗ 60 ವರ್ಷ ವಯಸ್ಸಾಗಿರುತ್ತದೆ. ಮೇಲೆ ಹೇಳಿದ ದಾವೆಯ ವಿಚಾರವಾಗಿ ಸಿವಿಲ್ ದಾವೆ ಬಾಕಿ ಇದೆ. ದೂರನ್ನು ಸರಕಾರಿ ಆಸ್ಪತ್ರೆಯಲ್ಲಿ ನೀಡಿರುತ್ತೇವೆ. ಆ ವೇಳೆಗೆ ಯಾರೆಲ್ಲಾ ತೊಂದರೆ ಮಾಡಿದ್ದರು ಎಂದು ನನಗೆ ತಿಳಿದಿತ್ತು. ಯಾರಿಗೆಲ್ಲಾ ತೊಂದರೆಯಾಗಿತ್ತು ಎಂಬ ವಿಚಾರವೂ ಗೊತ್ತಿತ್ತು. ನನ್ನ ಪ್ರಕಾರ ಸದಾನಂದ

ಹವಲ್ದಾರ್, ನಾಗರತ್ನ, ಹರೀಶ ಹಾಗೂ ಹರ್ಷಿತಾ ತೊಂದರೆ ಮಾಡಿರುತ್ತಾರೆ. ಹರ್ಷಿತಾ ಕುಂದಾಪುರ ಸರಕಾರಿ ಆಸ್ಪತ್ರೆಯ ವೈದ್ಯರು ಎಂದರೆ ನನಗೆ ತಿಳಿದಿಲ್ಲ.

ಚಾಸಾ-1 ನನ್ನ ಖಾಸಾ ಅಕ್ಕ. ಈ ಪ್ರಕರಣದಲ್ಲಿ ಆಕೆ ಪಿರ್ಯಾದುದಾರರಾಗಿರುತ್ತಾರೆ. ನಿಪಿ-1ರ ಕೊನೆಯ ಖಂಡಿಕೆ ಮಾತ್ರ ನಾನು ಬರೆದಿರುತ್ತೇನೆ. ಅಂದರೆ ನಿಪಿ-1ರಲ್ಲಿ 2 ನಮೂನೆಯ ಕೈಬರಹಗಳು ಇವೆ ಎಂದರೆ ಸರಿ. ನಿಪಿ-1ರಲ್ಲಿ ಪ್ರಾರಂಭದಲ್ಲಿರುವ ಕೈಬರಹ ಯಾರದ್ದು ನನಗೆ ಗೊತ್ತಿಲ್ಲ. ಸದ್ರಿ ಭಾಗವನ್ನು ಯಾವ ಸಂಧರ್ಭದಲ್ಲಿ ಬರೆಯಲಾಯಿತು ಎಂದು ನನಗೆ ತಿಳಿದಿಲ್ಲ ನಾನು ಹೊರಗೆ ಇದ್ದೆ. ಆದ್ದರಿಂದ ಯಾರು ಬರೆದಿದ್ದು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಈ ದೂರನ್ನು 3 ಜನರ ವಿರುದ್ದ ದಾಖಲಿಸಿರುತ್ತೇವೆ. ಈ ದೂರನ್ನು 1ನೇ ಆರೋಪಿ ವಿರುದ್ದ ಮಾತ್ರ ನೀಡಿದ್ದು ಎಂದರೆ ಸರಿಯಲ್ಲ.

ನಿಪಿ-1ರ ಪ್ರಕಾರ 3 ಜನರಿಗೆ ಪೆಟ್ಟಾಗಿದೆ ಎಂದು ಕಾಣಿಸಿರುತ್ತೇವೆ. ಅವರುಗಳೆಂದರೆ ನಾನು, ಚಾಸಾ-1 ಮತ್ತು 4ರವರು. ನಿಪಿ-1ರಲ್ಲಿ ಚಾಸಾ-1ರವರನ್ನು ಮಾತ್ರ ದೂಡಿ ಹಾಕಿದ ಬಗ್ಗೆ ಬರೆಯಲಾಗಿದೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಬರೆಯಲು ಹಾಗೂ ಅರ್ಥೈಯಿಸಿಕೊಳ್ಳಲು ಯಾವುದೇ ತೊಂದರೆ ಇಲ್ಲ. ನಮ್ಮ ವಿರುದ್ದ 3 ಕ್ರಿಮಿನಿಲ್ ಪ್ರಕರಣಗಳು ಇವೆ. ಈ ಪ್ರಕರಣದಲ್ಲಿ ಪ್ರಥಮವಾಗಿ ಚಾಸಾ-4ರವರಿಗೆ ಪೆಟ್ಟು ಬಿದ್ದಿರುತ್ತದೆ. ಅವರ ವಾಸದ ಮನೆ ಎಲ್ಲಿದೆ ಎಂದು ನನಗೆ ತಿಳಿದಿಲ್ಲ. ಆತನಿಗೆ ಸಾಕಷ್ಟು ವಯಸ್ಸಾಗಿದೆ ಎಂದರೆ ಸರಿ.

ಚಾಸಾ-1ರವರ ಸೀರೆಯನ್ನು 2ನೇ ಆರೋಪಿ ಹಿಡಿದು ಎಳೆದಿರುತ್ತಾರೆ. ಆತನ ಮಗಳು ಚಾಸಾ-1ರವರ ಸೊಂಟಕ್ಕೆ ಹೊಡೆದಿರುತ್ತಾರೆ. 3ನೇ ಆರೋಪಿ ಆಕೆಯ ಮೈಗೆ ಹೊಡೆದಿರುತ್ತಾರೆ. ಗಲಾಟೆಯು 30-35 ನಿಮಿಷ ನಡೆದಿರುತ್ತದೆ. ಚಾಸಾ-1ರವರಿಗೆ ಸಾಕಷ್ಟು ಪೆಟ್ಟು ಆಗಿತ್ತು. ನನಗೂ 3 ಜನರು ಹೊಡೆದಿರುತ್ತಾರೆ. 2ನೇ ಆರೋಪಿ ನನ್ನ ಬಟ್ಟೆಯನ್ನು ಹಿಡಿದು ಎಳೆದಿರುತ್ತಾರೆ. ಆ ದಿನ ನಾನು ಮುಮಾ1ನ್ನು ಧರಿಸಿದ್ದೆ. ಮುಮಾ1ನ್ನು ಪೊಲೀಸರಿಗೆ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ಚಾಸಾ-4ರವರಿಗೂ 3 ಜನರು ಹೊಡೆದಿರುತ್ತಾರೆ. ನನಗೆ ಯಾವುದೇ ರಕ್ತಗಾಯವಾಗಿಲ್ಲ. ಚಾಸಾ-1ರವರಿಗೆ ತಲೆಯಲ್ಲಿ ರಕ್ತಗಾಯವಾಗಿರುತ್ತದೆ.

ಗಲಾಟೆಯನ್ನು ತಪ್ಪಿಸಲು ಚಾಸಾ-3 ಮತ್ತು 6ರವರು ಬಂದಿರುತ್ತಾರೆ. ದೂರು ನೀಡುವಾಗ ಬೆಳಿಗ್ಗೆ 10-45 ಆಗಿತ್ತು. ಗಲಾಟೆ ಮುಗಿಯುವಾಗ ಬೆಳಿಗ್ಗೆ 10-45 ಆಗಿತ್ತು. ನಿಪಿ-1ರ ಮೊದಲ ಅರ್ಧ ಭಾಗ ಎಷ್ಟು ಗಂಟೆಗೆ ಬರೆಯಲಾಗಿತ್ತು ಎಂದು ನನಗೆ ತಿಳಿದಿಲ್ಲ. ನಾನು ವೈದ್ಯರ ಬಳಿ ತಪಾಸಣೆಗಾಗಿ ಹೋಗಿಲ್ಲ. ಈ ಪ್ರಕರಣದಲ್ಲಿ ಒಟ್ಟು 3 ಸಹಿಗಳನ್ನು ಮಾಡಿರಬಹುದು. 2ನೇ ಆರೋಪಿ ಕೋಲಿನಿಂದ ಚಾಸಾ-1ರವರಿಗೆ 2 ಪೆಟ್ಟು ಕೊಟ್ಟಿರುತ್ತಾರೆ. ಸದ್ರಿ ಕೋಲನ್ನು ಪೊಲೀಸರು ಅನಂತರ ತೋರಿಸಿರುವುದಿಲ್ಲ.

ಆರೋಪಿತರು ನನಗೆ ಬೈದಿಲ್ಲ, ಹೊಡೆದಿಲ್ಲ ಹಾಗೂ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಪಂಚನಾಮೆಗಳನ್ನು ಠಾಣೆಯಲ್ಲಿ ತಯಾರಿಸಲಾಯಿತು ಎಂದರೆ ಸರಿಯಲ್ಲ. ಆರೋಪಿಗಳಿಂದ ನಮಗೆ ಯಾವ ರೀತಿಯ ತೊಂದರೆಯಾಗಿಲ್ಲ ಎಂದರೆ ಸರಿಯಲ್ಲ. ಆಗಾಗ ನಾವು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**